**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಅನಿಲಕುಮಾರ ಪಿರಾಜಿ ನಂದೆ |
| ತಂದೆಯ ಹೆಸರು | : ಶ್ರೀ. ಪಿರಾಜಿ ನಂದೆ |
| ವಯಸ್ಸು | : 58 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ್ತವ್ಯ | : ಅಂಬೇಡ್ಕರ ನಗರ, ಸದಲಗಾ |
| ದಿನಾಂಕ | : 12-02-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಕಲಂ 223 ಬಿ.ಎನ್.ಎಸ್.ಎಸ್ ಅಡಿ ಸ್ವಪ್ರಮಾಣೀಕೃತ ಹೇಳಿಕೆ**

ನನಗೆ ಫ್ರಾಸಾ-1 ರವರ ಪರಿಚಯ ಇರುತ್ತದೆ. ನನ್ನದು ಹಿಂದೂ ಹೊಲೆಯರ ಜಾತಿಯಾಗಿರುತ್ತದೆ. ಫ್ರಾಸಾ-1 ರವರ ಜಾತಿ ಹಿಂದೂ ಹೊಲೆಯರ ಜಾತಿಯಾಗಿರುತ್ತದೆ. ಆಶ್ರಯ ಗೃಹ ನಿರ್ಮಾಣ ಸಹಕಾರ ಸಂಘ ಸದಲಗಾದಲ್ಲಿ ಇದ್ದು ಸದರಿ ವಿಷಯವನ್ನು ಪಿರ್ಯಾದಿದಾರರು ನನಗೆ ತಿಳಿಸಿರುತ್ತಾರೆ. ಆಶ್ರಯ ಗೃಹ ನಿರ್ಮಾಣ ಸಹಕಾರ ಸಂಘದವರು ಜಿಲ್ಲಾಧಿಕಾರಿಗಳ ಕಡೆಯಿಂದ 6 ಎಕರೆ ಜಮೀನನ್ನು ಮಂಜೂರು ಮಾಡಿಕೊಂಡಿರುತ್ತಾರೆ. ಸದರಿ ಜಮೀನಿನ ಪೈಕಿ ಶೇಕಡಾ 50 ರಷ್ಟು ಅಂದರೆ 3 ಎಕರೆ ಜಮೀನನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರಿಗೆ ಆಶ್ರಯ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಪ್ಲಾಟಗಳನ್ನು ಮಾಡಿ ಕೊಡಬೇಕೆಂದು ಆದೇಶ ಇರುತ್ತದೆ.

**ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.